

ಚಿತ್ರ: ವಿಕಿಕಾಮನ್ಸ್

# ರಂಗರತ್ನ

ಪ್ರವೀಣ ಕುಲಕರ್ಣಿ

ಆಧುನಿಕ ರಂಗಭೂಮಿಯೊಂದಿಗೆ ಸಾಂಪ್ರದಾಯಿಕ ಕಲೆಗಳನ್ನು ಜೋಡಿಸಿದ ರತನ್ ಥಿಯಂ ಭಾರತೀಯ ರಂಗಭೂಮಿಗೆ ಹಲವು ಹೊಸತುಗಳನ್ನು ಕೊಟ್ಟವರು. ಆದ್ದರಿಂದಲೇ, ಕಳೆದ ವಾರ ಅವರು ಅಸುನೀಗಿದಾಗ ರಂಗಜಗತ್ತಿನ ಅತ್ಯದ್ಭುತವಾದ ನಂದಾದೀಪವೊಂದು ನಂದಿ ಹೋಯಿತು ಎಂದು ದೇಶದ ಪ್ರಮುಖ ರಂಗಕರ್ಮಿಗಳೆಲ್ಲ ಬೇಸರ ವ್ಯಕ್ತಪಡಿಸಿದರು. ನಮ್ಮ ಸಾಂಪ್ರದಾಯಿಕ ರಂಗ ಪ್ರಯೋಗಗಳನ್ನು ಆಧುನಿಕ ದೃಷ್ಟಿಕೋನದಿಂದ ಅವಲೋಕಿಸಿ, ಅವುಗಳಿಗೊಂದು ಮಾಂತ್ರಿಕ ಸ್ಪರ್ಶ ನೀಡಿದವರು ಅವರು. ಪುರಾತನ ಕಥೆಯೊಂದನ್ನು ಸಮಕಾಲೀನ ಜಗತ್ತಿಗೆ ಸ್ಪಂದನಶೀಲವಾಗುವಂತೆ ಮರುಕಟ್ಟುತ್ತಿದ್ದ ರತನ್, ರಂಗಭೂಮಿಯ ಕೆಲವೇ ಕೆಲವು ರತ್ನಗಳಲ್ಲಿ ಒಬ್ಬರಾಗಿ ಹೊಳೆಯುತ್ತಾರೆ.

ಇಂಫಾಲ್‌ನಲ್ಲಿ ಕೋರಸ್ ರೆಪರ್ಟರಿ ಥಿಯೇಟರ್ ಎಂಬ ಸಂಸ್ಥೆಯನ್ನು ಕಟ್ಟಿದ್ದ ಅವರು ರಂಗಭೂಮಿಯಲ್ಲಿ ನಡೆಸಿದ ಪ್ರಯೋಗಗಳು ಒಂದೆರಡಲ್ಲ. ಮಣಿಪುರದ ಸಾಂಪ್ರದಾಯಿಕ ಹಾಡು, ನೃತ್ಯ, ಸಮರ ಕಲೆಗಳನ್ನು ರಂಗಮಂಚಕ್ಕೆ ತಂದವರು ಅವರು. ಹೊಸ ಹೊಸ ಪ್ರಯೋಗಗಳಿಗೆ ಅವರು ಹೇಗೆ ಕೈ ಹಾಕುತ್ತಿದ್ದರೋ ಹಾಗೆಯೇ ಅವರ ಮನಸ್ಸು ಭಾರತದ 'ಕ್ಲಾಸಿಕ್' ರಂಗಭೂಮಿಯ ಕುರಿತೂ ಚಿಂತಿಸುತ್ತಿತ್ತು. 1980ರ ದಶಕದಲ್ಲಿ ಅವರು ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಾಗ ಇಡೀ ದೇಶದ ರಂಗಭೂಮಿಗೆ ಹೊಸ ಚೈತನ್ಯ ನೀಡಲು ಶ್ರಮಿಸಿದವರು. ಹೊಸ ಚಿಂತನೆಗೆ ಹಚ್ಚಿದವರು. ರತನ್ ಅವರ ಅವಧಿಯಲ್ಲಿ ದೇಶದ ರಂಗಭೂಮಿಯಲ್ಲಿ ಹೊಸ ನೀರು ಹರಿಯಿತು ಎಂದು ಆ ಕ್ಷೇತ್ರದ ತಜ್ಞರು ಹೇಳುತ್ತಾರೆ.

'ಚಕ್ರವ್ಯೂಹ', 'ಉತ್ತರ ಪ್ರಿಯದರ್ಶಿ', 'ಊರುಭಂಗಂ', 'ಅಂಧಯುಗ' ಪ್ರಯೋಗಗಳು ರತನ್ ಅವರಿಗೆ ತುಂಬಾ ದೊಡ್ಡ ಖ್ಯಾತಿಯನ್ನು ತಂದುಕೊಟ್ಟವು. 'ಚಿಂಗ್ಲಾನ್ ಮಾಪನ್ ತಂಪಕ್ ಅಮಾ' (ಏಳು ಪರ್ವತಗಳು, ಒಂದು ಕಣಿವೆ) ಎಂಬ ಅವರ ನಾಟಕ ಮಣಿಪುರದ ಗಲಭೆಯ ಕಥೆಯನ್ನು ಸಮರ್ಥವಾಗಿ ಕಟ್ಟಿಕೊಟ್ಟಿತ್ತು. ಕಾಳಿದಾಸನ ಕೃತಿಯನ್ನು ಆಧರಿಸಿದ 'ಋತು ಸಂಹಾರಂ' ನಾಟಕ ರತನ್ ಅವರ ಕಲ್ಪನೆಯ ಶಕ್ತಿಗೆ ದ್ಯೋತಕವಾಗಿತ್ತು. 'ವೆನ್ ವಿ ಡೆಡ್ ಅವೇಕನ್' ಅವರ ಮತ್ತೊಂದು ಪ್ರಮುಖ ನಾಟಕ. ಭಾರತದ ರಂಗಭೂಮಿ ಮರಳಿ ತನ್ನ ಮೂಲವನ್ನು ಕಂಡುಕೊಳ್ಳಬೇಕು ಎಂದು ಬಲವಾಗಿ ಪ್ರತಿಪಾದಿಸಿದ್ದ ಅವರು 'ಥಿಯೇಟರ್ ಆಫ್ ರೂಟ್ಸ್' ಚಳವಳಿಯ ಮುಂಚೂಣಿಯಲ್ಲಿದ್ದವರು. ಬ್ರಿಟಿಷರ ಅವಧಿಯಲ್ಲಿ ಪಾಶ್ಚಿಮಾತ್ಯ ರಂಗಭೂಮಿಯ ಪ್ರಭಾವಕ್ಕೆ ಒಳಗಾಗಿದ್ದ ಭಾರತೀಯ ರಂಗಭೂಮಿ ಮರಳಿ ತನ್ನತನವನ್ನು ಕಂಡುಕೊಳ್ಳಬೇಕು ಎನ್ನುವುದು ಅವರ ಪ್ರಬಲ ಆಕಾಂಕ್ಷೆಯಾಗಿತ್ತು. ರತನ್ ಅವರ ನಾಟಕಗಳು, ಪ್ರಯೋಗಗಳು, ಕೆಲಸಗಳು, ರಂಗ ಚಟುವಟಿಕೆಗಳು ಅವರ ಈ ಆಶಯಕ್ಕೆ ಪೂರಕವಾಗಿದ್ದವು.

ಇಂದಿನ ರಾಜಕೀಯ ವ್ಯವಸ್ಥೆಗೆ ಮುಖಾಮುಖಿ ಆಗುತ್ತಲೇ ರತನ್ ಅವರ ಕೃತಿಗಳು ಸಮಾಜ ಕಲ್ಯಾಣಕ್ಕಾಗಿ ಹಂಬಲಿಸುತ್ತಿದ್ದವು. ಆಧ್ಯಾತ್ಮದ ಹುಡುಕಾಟವೂ ಅವರ ನಾಟಕಗಳ ಮತ್ತೊಂದು ಪ್ರಮುಖ ಲಕ್ಷಣವಾಗಿತ್ತು. ತರ್ಕಬದ್ಧ ಹಾಗೂ ವಿಶ್ಲೇಷಣಾತ್ಮಕ ಗುಣಗಳನ್ನು ಒಳಗೊಂಡ ಅವರ ಪ್ರಯೋಗಗಳು ಅವರೊಬ್ಬ ಚತುರ ನಾಟಕಕಾರ ಎಂಬುದನ್ನು ಸಾರಿ ಹೇಳುತ್ತಿದ್ದವು. ಗ್ರೀಕ್ ರಂಗಭೂಮಿಯ ವೈಶಿಷ್ಟ್ಯ, ಜಪಾನ್‌ನ ನಾಹ್ ರಂಗ ಪರಂಪರೆಯ ತಿರುಳನ್ನು ತೆಗೆದುಕೊಂಡು ಭಾರತೀಯ ನಾಟ್ಯಶಾಸ್ತ್ರದ ಆಧಾರದ ಮೇಲೆ ನಮ್ಮ ರಂಗಭೂಮಿಯನ್ನು ಬೆಳೆಸಬೇಕು ಎಂದು ಹಂಬಲಿಸಿದವರೂ ಅವರಾಗಿದ್ದರು. ಮೈತೇಯಿ ಕಲೆಗಳ ಕುರಿತು ಆಳವಾದ ಅಧ್ಯಯನ ಮಾಡಿದವರೂ ಈ ರತನ್.

ರತನ್ ಅವರಿಗೆ ಬಂದ ಪ್ರಶಸ್ತಿ–ಪುರಸ್ಕಾರಗಳಿಗೆ ಲೆಕ್ಕವಿಲ್ಲ. ಪದ್ಮಶ್ರೀ, ಸಂಗೀತ ನಾಟಕ ಅಕಾಡೆಮಿ, ಫ್ರಾನ್ಸ್‌ನ ಲಾ ಗ್ರ್ಯಾಂಡೆ ಮೆಡಿಲ್ಲೆ, ಜಾನ್ ಡಿ ರಾಕ್‌ಫೆಲ್ಲರ್ ಪುರಸ್ಕಾರ ಸೇರಿದಂತೆ ಹಲವು ಗೌರವಗಳು ಅವರನ್ನು ಹುಡುಕಿಕೊಂಡು ಬಂದಿವೆ. ನಾಗಾಲ್ಯಾಂಡ್ ಬಂಡುಕೋರರ ವಿರುದ್ಧ ಕದನ ವಿರಾಮ ಒಪ್ಪಂದ ಮಾಡಿಕೊಂಡ ಕೇಂದ್ರದ ಕ್ರಮವನ್ನು ವಿರೋಧಿಸಿ ಪದ್ಮಶ್ರೀ ಪ್ರಶಸ್ತಿಯನ್ನು ವಾಪಸ್ ಮಾಡಿದವರು ಅವರು.

ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಹೊಸತರಲ್ಲಿ ಜನಿಸಿದ ರತನ್, ಮಣಿಪುರಿ ನೃತ್ಯ ಮತ್ತು ಪೇಂಟಿಂಗ್ ಕಲೆ ಎರಡನ್ನೂ ಶಾಸ್ತ್ರೀಯವಾಗಿ ಕಲಿತವರು. ಕೋರಸ್ ರೆಪರ್ಟರಿ ಥಿಯೇಟರ್ ಸಂಘಟನೆ ಕಟ್ಟಿಕೊಂಡು ಜಗತ್ತನ್ನು ಸುತ್ತಿದವರು. ಅಲ್ಲಿನ ಹೊಸ ಹೊಸ ಪ್ರಯೋಗಗಳನ್ನು ಭಾರತೀಯ ದೃಷ್ಟಿಕೋನದಿಂದ ನಿಕಷೆಗೆ ಒಳಪಡಿಸಿದವರು. ಹಾಗಾಗಿಯೇ ಅವರನ್ನು ಭಾರತದ ಅಗ್ರಮಾನ್ಯ ರಂಗಗುರು ಎಂದೇ ಆರಾಧಿಸಲಾಗುತ್ತಿತ್ತು. ಕನ್ನಡ ರಂಗಭೂಮಿಯ ದಿಗ್ಗಜರಿಗೆ ಅವರು ಸ್ನೇಹಿತರಾಗಿದ್ದರು. ಅವರ ನಿರ್ಗಮನವು ಭಾರತೀಯ ರಂಗಭೂಮಿಯ ಅತ್ಯಂತ ಆಪ್ತ ಸ್ನೇಹಿತನ ನಿರ್ಗಮನವೂ ಆಗಿದೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65